ಅಧ್ಯಕ್ಷರು: ನನಗೂ ಅನುಭವವಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಇದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದರೆ ಮತ್ತೆ ನಾವು ಏಕೆ ಇರಬೇಕು.

ಅಧ್ಯಕ್ಷರು: ಗೋವಿಂದ ಕಾರಜೋಳರವರೆ, ತಾವು ಕೇಳಿ.

ವಿಷಯ: ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಗ್ರಾಮ ಪಂಚಾಯತಿಯ ಚುನಾವಣೆಯ ಸಂದರ್ಭದಲ್ಲಿ ಮುಗ್ಧ ಜನರ ವಿರುದ್ಧ ಪೋಲಿಸರು ಸಿ.ಆರ್.ಪಿ.ಸಿ. 107 ರಡಿಯಲ್ಲಿ ಪ್ರಕರಣ ದಾಖಲಿಸಿರುವ ಬಗ್ಗೆ

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಗ್ರಾಮ ಪಂಚಾಯತಿ ಚುನಾವಣೆಯ ಸಂದರ್ಭದಲ್ಲಿ ಮುಗ್ಧ ಜನರ ವಿರುದ್ಧ ಪೋಲಿಸರು ಸಿ.ಆರ್.ಪಿ.ಸಿ. 107 ರಡಿಯಲ್ಲಿ ಪ್ರಕರಣ ದಾಖಲಿಸಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆಯಲಾಗಿದೆ

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮುಧೋಳ ತಾಲ್ಲೂಕಿನ ಗ್ರಾಮ ಪಂಚಾಯತಿ ಚುನಾವಣೆ ಸಂದರ್ಭದಲ್ಲಿ ಗ್ರಾಮದ ಮುಗ್ದೆ ಜನರ ವಿರುದ್ಧವಾಗಿ ಪೊಲೀಸರು ಕಲಂ 107 ಸಿಆರ್.ಪಿ.ಸಿ ಅಡಿಯಲ್ಲಿ ಸುಮಾರು 30 ಪ್ರಕರಣಗಳನ್ನು ದಾಖಲಿಸಿದ ಬಗ್ಗೆ ಡಿ.ಎಸ್.ಪಿ, ಡಿಸಿಆರ್‌ಬಿ, ಬಾಗಲಕೋಟ ರವರಿಂದ ವಿಚಾರಣೆ ಮಾಡಿಸಿದ್ದು, ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ. ಮುಧೋಳ ಪೊಲೀಸ್ ಠಾಣೆಯಲ್ಲಿ ದಿನಾಂಕ 15/05/2015 ರಿಂದ 25/05/2015 ರವರೆಗಿನ ಅವಧಿಯಲ್ಲಿ 107 ಸಿಆರ್.ಪಿ.ಸಿ. ಅಡಿಯಲ್ಲಿ ಒಟ್ಟು 18 ಪ್ರಕರಣಗಳು ದಾಖಲಾಗಿದ್ದು, ಈ 18 ಪ್ರಕರಣಗಳಲ್ಲಿ ಒಟ್ಟು 116 ಜನ ಎದುರುದಾರರು ಇದ್ದು, ಅವುಗಳ ಪೈಕಿ 68

ಜನರ ಮೇಲೆ ಈ ಹಿಂದೆ ಪ್ರಕರಣಗಳು ದಾಖಲಾದವರು 55 ಜನರು, ಎಂಓಬಿ (Modus Operandı Bureau) 8 ಜನರು, ರೌಡಿಗಳು 5 ಜನರು ಇರುತ್ತಾರೆ. 13 ಜನರ ವಿರುದ್ಧ ಸಾರ್ವಜನಿಕರಿಂದ ದೂರುಗಳು ಸ್ವೀಕರಿಸಿರುವುದರಿಂದ ಅದನ್ನು ಪರಿಶೀಲಿಸಿ ಅವರ ಮೇಲೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಇನ್ನುಳಿದ 35 ಜನರ ವಿರುದ್ಧ ಯಾವುದೇ ಪೂರ್ವಾಪರ ದಾಖಲೆಗಳು ಇಲ್ಲದೇ ಕೇವಲ ಬೀಟ್ ಸಿಬ್ಬಂದಿಯವರು ನೀಡಿದ ವರದಿಯನ್ನು ಆಧರಿಸಿ ಪ್ರಕರಣಗಳನ್ನು ದಾಖಲಿಸಿರುವುದು ಕಂಡು ಬರುತ್ತದೆ. ಈ ಬಗ್ಗೆ ಬೀಟ್ ಬುಕ್ಕಿನಲ್ಲಿ ಅಥವಾ ಎಸ್ಎಚ್ಡಿ (Station House Diary) ನಲ್ಲಿ ಯಾವುದೇ ನಮೂದು ಇರದೇ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ, 35 ಜನರ ವಿರುದ್ಧ ಯಾವುದೇ ಪೂರ್ವಾಪರ ದಾಖಲೆಗಳು ಇಲ್ಲದೇ ಕೇವಲ ಬೀಟ್ ಸಿಬ್ಬಂದಿಯವರು ನೀಡಿದ ವರದಿಯನ್ನು ಆಧರಿಸಿ ಪ್ರಕರಣಗಳನ್ನು ದಾಖಲಿಸಿರುವುದರ ಸಂಬಂಧವಾಗಿ ಶ್ರೀ ಡಿ.ಕೆ. ಪಾಟೀಲ್, ಪಿಎಸ್ಐ, ಮುಧೋಳ ಪೊಲೀಸ್ ಠಾಣೆ ರವರ ವಿರುದ್ಧ ಕೆ.ಎಸ್.ಪಿ. ಡಿ.ಪಿ. ರೂಲ್ಸ್ (Karnataka State Police Disciplinary Proceeding Rules) ನಿಯಮ–7 ರ ಅಡಿಯಲ್ಲಿ ದಿನಾಂಕ: 24/6/2015 ರಂದು ದೋಷಾರೋಪಣಾ ಪತ್ರ ನೀಡಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತಿ ಚುನಾವಣೆ ಸಂದರ್ಭದಲ್ಲಿ ಸಿಆರ್ಪಿಸಿ 107 ರ ಪ್ರಕಾರ 30 ಪ್ರಕರಣಗಳನ್ನು 116 ಜನರ ಮೇಲೆ ದಾಖಲು ಮಾಡಿದ್ದಾರೆ. ಅವರು ಉತ್ತರ ಕೊಟ್ಟಿದ್ದಾರೆ. ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಬೀಟ್ ಸಿಬ್ಬಂದಿಯವರು ನೀಡಿದ ವರದಿಯ ಆಧಾರದ ಮೇಲೆ ಪ್ರಕರಣಗಳನ್ನು ದಾಖಲಿಸಿರುವುದು ಕಂಡು ಬರುತ್ತದೆ. ಈ ಬಗ್ಗೆ ಬೀಟ್ ಬುಕ್ಕಿನಲ್ಲಿ ಅಥವಾ ಎಸ್ಎಚ್ಡಿ (Station House Diary) ನಲ್ಲಿ ಯಾವುದೇ ನಮೂದು ಇರದೇ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ, 35 ಜನರ ವಿರುದ್ಧ ಯಾವುದೇ ಪೂರ್ವಾಪರ ದಾಖಲೆಗಳು ಇಲ್ಲದೇ ಕೇವಲ ಬೀಟ್ ಸಿಬ್ಬಂದಿಯವರು ನೀಡಿದ ವರದಿಯನ್ನು ಆಧರಿಸಿ ಪ್ರಕರಣಗಳನ್ನು ದಾಖಲಿಸಿರುವುದರ

ಸಂಬಂಧವಾಗಿ ಶ್ರೀ ಡಿ.ಕೆ. ಪಾಟೀಲ, ಪಿಎಸ್ಐ, ಮುಧೋಳ ಮೊಲೀಸ್ ಠಾಣೆ ರವರ ವಿರುದ್ದ ಕೆ.ಎಸ್.ಪಿ.ಡಿ.ಪಿ.ರೂಲ್ಸ್....

ಅಧ್ಯಕ್ಷರು: ಉತ್ತರ ಕೊಟ್ಟರುವುದನ್ನು ಮತ್ತೆ ನೀವು ಏಕೆ ಅದನ್ನೇ ಓದುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಅವರು ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ, ನಾನು ಈಗ ಏನು ಒತ್ತಾಯ ಮಾಡುತ್ತೇನೆಂದರೆ, ಯಾರು ನಿರಪರಾಧಿಗಳ ಮೇಲೆ ಪ್ರಕರಣ ದಾಖಲು ಮಾಡಿದ್ದಾರಲ್ಲ, ಬೀಟ್ ಸಿಬ್ಬಂದಿಯವರು ಅವರೇನು ವರದಿ ಕೊಟ್ಟಿದ್ದಾರಲ್ಲ, ಅವರನ್ನು ಕೂಡ suspend ಮಾಡಬೇಕು ಮತ್ತು ಪಿ.ಎಸ್.ಐ.ರವನ್ನು suspend ಮಾಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರೆ ಅದರ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರಕರಣ ಕೇಸ್‌ಗಳ ದಾಖಲೆಯಲ್ಲ. ಸಿ.ಆರ್.ಪಿ.ಸಿ.107 ಅಡಿಯಲ್ಲಿ ಎಂದರೆ ಒಂದು ಮುಚ್ಚಳಿಕೆ ಬರೆಸಿಕೊಳ್ಳುತ್ತೇವೆ, ಇನ್ನು ಮುಂದೆ ಯಾರೂ ಯಾವುದೇ ರೀತಿಯಲ್ಲಿ ಕಾನೂನನ್ನು ಉಲ್ಲಂಘನೆ ಮಾಡಬಾರದು. ಮಾನ್ಯ ಸದಸ್ಯರೆ, ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಉತ್ತರದಲ್ಲಿ ಹೇಳಿದ್ದೇನೆ, 35 ಜನರು ಮುಗ್ಧರಿದ್ದಾರೆ, ಅವರ ಮೇಲೆ ಈ ಮೊದಲೇ ಯಾವುದೇ ಕೇಸ್‌ಗಳು ಕೂಡ ಆಗಿರಲಿಲ್ಲ. ಅವರ ಮೇಲೆ ಬೀಟ್ ಕಾನ್ಸ್‌ಟೇಬಲ್‌ಗಳು ರಿಪೋರ್ಟ್ ಕೊಟ್ಟಿದ್ದಾರೆ, ಅದಕ್ಕೆ ನಾವು ಈಗಾಗಲೇ ಆ ಎಸ್.ಐ ಮೇಲೆ ಮತ್ತು ಕಾನ್ಸ್‌ಟೇಬಲ್ ಮೇಲೆ disciplainary action ಸಂಬಂಧ ಈಗಾಗಲೇ proceedings follow ಮಾಡಿದ್ದೇವೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಆ report ಬಂದ ಮೇಲೆ ಮತ್ತೆ further action ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಬೀಟ್ ಸಿಬ್ಬಂದಿಗಳ್ಯಾರು ಸುಳ್ಳು ವರದಿಯನ್ನು ಕೊಟ್ಟಿದ್ದಾರೆ, ಅವರನ್ನೂ ಸೇರಿಸಿಕೊಂಡು suspend ಮಾಡಬೇಕು.

ಶ್ರೀ ಕೆ.ಜೆ. ಜಾರ್ಜ್: Report ಬರಲಿ. ಆ report ಆಧರಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದರಂತೆ ಕ್ರಮ ವಹಿಸುತ್ತೇವೆ.

ವಿಷಯ: ಶಿಕಾರಿಪುರ ತಾಲ್ಲೂಕಿನಲ್ಲಿ ಸಿದ್ಧರಾಮೇಶ್ವರ ಭವನ, ವಾಲ್ಮೀಕಿ ಭವನ, ಅಂಬೇಡ್ಕರ್ ಭವನ ಮತ್ತು ಬಣಜಾರ್ ಭವನಗಳನ್ನು ಆಯಾ ಸಮುದಾಯದವರ ಕಾರ್ಯಕ್ರಮಗಳಿಗೆ ರಿಯಾಯಿತಿ ದರದಲ್ಲಿ ನೀಡುವ ಬಗ್ಗೆ.

ಶ್ರೀ ಬಿ.ವೈ. ರಾಘವೇಂದ್ರ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ತಾಲ್ಲೂಕಿನಲ್ಲಿ ಸಿದ್ಧರಾಮೇಶ್ವರ ಭವನ, ವಾಲ್ಮೀಕಿ ಭವನ, ಅಂಬೇಡ್ಕರ್ ಭವನ ಮತ್ತು ಬಣಜಾರ್ ಭವನಗಳನ್ನು ಆಯಾ ಸಮುದಾಯದವರ ಕಾರ್ಯಕ್ರಮಗಳಿಗೆ ರಿಯಾಯಿತಿ ದರದಲ್ಲಿ ನೀಡುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು: ನಿಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ. ಮುಂದಿನ ಸಲ ಹಾಕಿಕೊಳ್ಳೋಣ. ಈಗ ಸಂಬಂಧಪಟ್ಟ ಮಂತ್ರಿಗಳು ಕೂಡ ಈಗ ಇಲ್ಲ.

ಶ್ರೀ ಬಿ.ವೈ. ರಾಘವೇಂದ್ರ: ಆಯಿತು.

ಅಧ್ಯಕ್ಷರು: ಮುಂದಿನ ಗಮನ ಸೆಳೆಯುವ ಸೂಚನೆ ಪ್ರಮೋದ್ ಮಧ್ವರಾಜ್, ಬಂದಿಲ್ಲ. ಮುಂದಿನ ಗಮನ ಸೆಳೆಯುವ ಸೂಚನೆ ಈ. ತುಕಾರಾಂ.

ವಿಷಯ: ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿರುವ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳಲ್ಲಿ